**ಸಾಕ್ಷಿಗೆ ದಿನಾಂಕ : 27-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಆರೋಪಿ ಪರವಾಗಿ**

1. ನೀವು ಇದೊಂದೆ ಚೆಕಬೌನ್ಸ ಪ್ರಕರಣವನ್ನು ಸಲ್ಲಿಸಿದ್ದೀರಿ ಎಂದು ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿ. ಸಿ.ಸಿ.ನಂ.721/2021 ರಂತೆ 1 ಚೆಕ ಬೌನ್ಸ ಪ್ರಕರಣವನ್ನು ನೀವು ಇಂಗಳೆ ಅವರ ವಿರುದ್ದ ಸಲ್ಲಿಸಿದ್ದೀರಿ ಎಂದರೆ ಅದು ಮುಕ್ತಾಯಗೊಂಡಿದೆ ಎಂದು ಸಾಕ್ಷಿ ಹೇಳುತ್ತಾರೆ. ಯಾವ ವರ್ಷದಲ್ಲಿ ಸದರಿ ಪ್ರಕರಣ ಮುಕ್ತಾಯವಾಯಿತು ಎಂದರೆ 2023 ರಲ್ಲಿ ಆಗಿದ್ದು, ತಿಂಗಳು ದಿನಾಂಕ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಪ್ರಕರಣವನ್ನು 1 ಲಕ್ಷ 50 ಸಾವಿರಕ್ಕೆ ಸಲ್ಲಿಸಿದ್ದೆನು. ನೀವು ಒಟ್ಟು 4 ರಿಂದ 5 ಬಾಂಡ್ ಪೇಪರಗಳ ಮೇಲಿನ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಸಲ್ಲಿಸಿದ್ದೀರಿ ಎಂದರೆ ಪ್ರಾಮಿಸರಿ ನೋಟ್ ಮೇಲೆ 1 ಪ್ರಕರಣ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ನನ್ನ ಸಂಬಂಧಿಕನ ವಿರುದ್ದ 1 ಲಕ್ಷ 60 ಸಾವಿರಕ್ಕೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

2. ನನಗೆ ಲಕ್ಕವ್ವ ಕೌಜಲಗಿ ಅವರ ಪರಿಚಯ ಇದೆ. ಅದೇ ರೀತಿ ಜಯಶ್ರೀ ಬೆಳಗಲಿ ಅವರ ಪರಿಚಯ ಇದೆಯಾ ಎಂದರೆ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಅವರಿಬ್ಬರಿಗೂ ನೀವು 2 ಲಕ್ಷ 50 ಸಾವಿರ ರೂಪಾಯಿಗೆ ಪ್ರಾಮಿಸರಿ ನೋಟ್ ಪಡೆದಿದ್ದು, ಅದಕ್ಕೆ ಸಂಬಂಧಿಸಿದಂತೆ ನೋಟಿಸ್ ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಅವರಿಬ್ಬರು ಬಂದು ನನಗೆ ಬರತಕ್ಕ ಮೊತ್ತವನ್ನು ನನಗೆ ಹಿಂದಿರುಗಿ ನೀಡಿ ಪ್ರಕರಣ ಸಲ್ಲಿಸಬೇಡಿ ಎಂದು ಹೇಳಿದರು ಎಂದು ಸಾಕ್ಷಿ ಹೇಳುತ್ತಾರೆ. ಪ್ರಕರಣ ಸಲ್ಲಿಸುವ ಪೂರ್ವದಲ್ಲಿ ನೋಟಿಸ್ ಮೇಲೆ ಬಂದು ರಾಜೀ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಿನಾಂಕದಂದು ಹಣ ಹಿಂದಿರುಗಿಸಿದರು ಎಂದು ಹೇಳಬಹುದಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಇಬ್ಬರು ವ್ಯಕ್ತಿಗಳಿಂದ ನೀವು ಪ್ರಾಮಿಸರಿ ನೋಟನೊಂದಿಗೆ 2 ಚೆಕಗಳನ್ನು ಸಹ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಅವರಿಬ್ಬರ ಚೆಕ ನಿಮ್ಮ ಬಳಿ ಇಲ್ಲ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3. ನೀವು ಈ ಪ್ರಕರಣದಲ್ಲಿ ಹಾಜರಪಡಿಸಿದ ಕೈಗಡ ಪತ್ರವನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಮಾನ್ಯವಾಗಿ 2 ನೇ ಪುಟದಲ್ಲಿ ಯಾವುದೇ ಗ್ಯಾಪ್ ಬಿಡದೇ ಕಂಡಿಕೆಗಳಲ್ಲಿ ಬರೆದು ಪಕ್ಷಗಾರರ ಸಹಿ ಪಡೆಯುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹಣ ಪಡೆದವರು ಮತ್ತು ಹಣ ತೆಗೆದುಕೊಳ್ಳುವವರ ಸಹಿ ನಮೂದು ಇದ್ದ ಸ್ಥಳದ ಮೇಲೆಯೇ ಇರುತ್ತದೆ

ಎಂದರೆ ಸರಿ. ಕೈಗಡ ಪತ್ರ ಅಗುವ ಸಮಯದಲ್ಲಿ ನಾನು ಹಾಜರ ಇದ್ದೆನು. ಸಾಕ್ಷಿಗೆ ಈಗ ನಿಪಿ-6 ನ್ನು ತೋರಿಸುತ್ತಿದ್ದು, ಸದರಿ ಕೈಗಡ ಪತ್ರದಲ್ಲಿ ಕೈಗಡ ತೆಗೆದುಕೊಂಡುವವರ ಸಹಿ ಎಂದು ನಮೂದಿಸಿದ್ದರ ಬಹಳ ಕೆಳಗಡೆ ಆರೋಪಿತಳ ಸಹಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲಾತಿ ನೀಡಿದ ಕೂಡಲೇ ಆರೋಪಿತಳು ಗಡಿಬಿಡಿಯಿಂದ ಅಲ್ಲಿ ಸಹಿ ಮಾಡಿದಳು ಎಂದು ಹೇಳುತ್ತಾರೆ. ಖಾಲಿ ಬಾಂಡ್ ಪೇಪರ ಮೇಲೆ ಯಾವುದೇ ಅಂಶಗಳನ್ನು ನಮೂದಿಸದೇ ನೀವು ಆರೋಪಿತಳ ಸಹಿ ಪಡೆದಿದ್ದೀರಿ ಎಂದರೆ ಸರಿಯಲ್ಲ.

4. ಆರೋಪಿತಳು ಎಲ್ಲಿಯವರೆಗೆ ವಿದ್ಯಾಬ್ಯಾಸ ಮಾಡಿದ್ದಾರೆ ಎಂದು ಗೊತ್ತಿದೆಯಾ ಎಂದರೆ ನಿಖರವಾಗಿ ಗೊತ್ತಿಲ್ಲ, 7 ನೇ ತರಗತಿವರೆಗೆ ಓದಿದ್ದಾರೆ ಎಂದು ನನಗೆ ಹೇಳಿದ್ದಾರೆ ಎಂದು ಹೇಳುತ್ತಾರೆ. ಆರೋಪಿತಳಿಗೆ ಇಂಗ್ಲೀಷನಲ್ಲಿ ಸಹಿ ಮಾಡುವುದು ಹೊರತುಪಡಿಸಿ ಇಂಗ್ಲೀಷ ಓದಲು - ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚೆಕ ಮೇಲಿನ ನಿಪಿ-1 (ಎ) ಸಹಿಗೂ ಮತ್ತು ಉಳಿದ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-6 ಕೈಗಡ ಪತ್ರದ ಸಹಿ ಡಿ.ಎಸ್.ಜವಳಿ ಎಂದು ಇದೆ ಎಂದರೆ ಸರಿ. ಬಾಂಡ್ ಪೇಪರನಲ್ಲಿ ಜವಳಿ ಅವರನ್ನು ಹಿರೇಮಠ ಎಂದು ಕರೆಯುತ್ತಾರೆ ಎಂದು ನಮೂದಿಸಲಾಗಿದೆಯಾ ಎಂದರೆ ನಮೂದಿಸಲಾಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಬಾಂಡ್ ಪೇಪರ ಬರೆದುಕೊಡುವಾಗ ಜವಳಿ ಎಂದು ನಮೂದಿಸಲಾಗಿದ್ದು, ನಾವು ಆರೋಪಿತಗಳನ್ನು ಹಿರೇಮಠ ಎಂದು ಕರೆಯುತ್ತಿದ್ದು, ಆ ರೀತಿ ಜವಳಿ ಎಂದು ಏಕೆ ಸಹಿ ಮಾಡಿದ್ದೀರಿ ಎಂದರೆ ಆಧಾರ ಕಾರ್ಡನಲ್ಲಿ ಆಕೆಯ ಮದುವೆಯ ಮುಂಚಿನ ಅಡ್ಡಹೆಸರು ಹಿರೇಮಠ ಇದ್ದು, ತಿದ್ದುಪಡಿ ಮಾಡಿಕೊಂಡು ಜವಳಿ ಎಂದು ಮಾಡಿಸಿಕೊಂಡಿದ್ದೇನೆ, ಆದ್ದರಿಂದ ಆ ರೀತಿ ಸಹಿ ಮಾಡಿಸಿಕೊಂಡಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ದೂರಿನಲ್ಲಿ, ನಿಪಿ-6 ರಲ್ಲಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆ ರೀತಿ ಮೊದಲ ಹೆಸರು ಹಿರೇಮಠ ಇದ್ದು, ನಂತರ ಜವಳಿ ಎಂದು ಆಗಿದೆ ಎಂದು ಹೇಳಿ ಬರೆಸಿದ್ದೀರಾ ಎಂದರೆ ದೂರಿನಲ್ಲಿ ನಮೂದು ಇದೆ ಎಂದು ಸಾಕ್ಷಿ ಹೇಳುತ್ತಾರೆ.

5. ಲಕ್ಕವ್ವ ಕೌಜಲಗಿ ಮತ್ತು ಜಯಶ್ರೀ ಬೆಳಗಲಿ ಇವರು ನಿಮ್ಮ ದುರ್ಗಾವಾಹಿನಿ ಸಂಸ್ಥೆಯಲ್ಲಿ ತಲಾ 50 ಸಾವಿರ ರೂಪಾಯಿ ಸಾಲ ಪಡೆದ ವ್ಯಕ್ತಿಗಳು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತಳು ಸಹ ನಿಮ್ಮ ದುರ್ಗಾ ವಾಹಿನಿ ಸಂಸ್ಥೆಯಲ್ಲಿ ಕೇವಲ 50 ಸಾವಿರ ಸಾಲ

ಪಡೆದವಳು ಎಂದರೆ ಸರಿಯಲ್ಲ. ಆ ರೀತಿ ಪಡೆದುಕೊಂಡ ಸಾಲದ ಮೊತ್ತವನ್ನು ಪ್ರತಿವಾರದ ಬಡ್ಡಿಯಂತೆ ನಿಮಗೆ ಆರೋಪಿತಳು ಮರುಪಾವತಿ ಮಾಡಿದ್ದು, ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ಬಾಂಡ್ ಬರೆಸಿಕೊಳ್ಳುವ ಸಮಯದಲ್ಲಿ ಪಡೆದ ಚೆಕ್ಕನ್ನು ದುರುಪಯೋಗಿಸಿಕೊಂಡು ಆಕೆಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಬ್ಯಾಂಕಿನ ಖಾತಾ ಉತಾರೆಯನ್ನು ಹಾಜರಪಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು 300 ಪುಟಗಳ ಸ್ಟೇಟ್‌ಮೆಂಟ ಇದ್ದ ಕಾರಣ ಹಾಜರಪಡಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಸಹೋದರಿಯು ಸಹ ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಲಯದಲ್ಲಿ, ಚೆಕಬೌನ್ಸ ಪ್ರಕರಣ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಿ.ಸಿ. ನಂ.329/2024 ಎಂದು ಸದರಿ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನೀವು ಬಡವರಿಗೆ ಸಹಾಯ ಆಗಲೀ ಎಂದು ಪಡೆದ ಮೊತ್ತವನ್ನು ಅವರು ಹಿಂದಿರುಗಿಸಿದ ನಂತರವೂ ಸಹ ಭದ್ರತೆಗಾಗಿ ಪಡೆದ ಚೆಕ್ಕುಗಳನ್ನು ಮತ್ತು ದಾಖಲಾತಿಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ನೋಟಿಸ್ ನೀಡಿ ಸುಳ್ಳು ಪ್ರಕರಣ ಸಲ್ಲಿಸಿ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ದುರ್ಗಾ ವಾಹಿನಿ ಸಂಸ್ಥೆ ಯಾವ ವರ್ಷದಲ್ಲಿ ನೋಂದಾಯಿತ್ ಆಯಿತು ಎಂದರೆ 2011 ರಿಂದ 2012 ರಲ್ಲಿ ಆಗಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಸಂಘ ನೋಂದಾಯಿತ್ ಆಗುವ ಸಮಯದಲ್ಲಿ ನಿಮ್ಮ ಆದಾಯ ತೋರಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಆದಾಯ ತೆರಿಗೆ ಪಾವತಿದಾರರು ಎಂದು ಮತ್ತು ನಿಮಗೆ ಬೇರೆ ಬೇರೆ ಆದಾಯದ ಮೂಲಗಳು ಇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೆಚ್ಚಿನ ಬಡ್ಡಿ ಮೊತ್ತವನ್ನು ಪಡೆಯುವ ಉದ್ದೇಶದಿಂದ, ಎಲ್ಲಾ ಮರುಪಾವತಿ ಆದ ನಂತರ ಸುಳ್ಳು ಪ್ರಕರಣ ಸಲ್ಲಿಸುತ್ತಿದ್ದೀರಿ ಎಂದರೆ ಸರಿಯಲ್ಲ. ಜಯಶ್ರೀ, ಲಕ್ಕವ್ವ ಮತ್ತು ಆರೋಪಿತಳ ಕಡೆಯಿಂದ ನೀವು ಬರೆಸಿಕೊಂಡ ಬಾಂಡಗೆ ಕುಳಲಿ ಅವರೆ ಪತ್ರ ಬರಹಗಾರರು ಎಂದರೆ ಸರಿ. ಓ.ಎಸ್.ನಂ.116/2024 ರ ವಾದಿಯಾದ ವಿಶಾಲ ಮುರಕಟನಾಳ ಅವರು ಸಹ ಕುಳಲಿ ಅವರ ಕಡೆ ಬಾಂಡ್ ಪೇಪರ ಬರೆಸಿಕೊಂಡಿದ್ದಾರೆ ಎಂದರೆ ಅವರು ಅವರ ಪರಿಚಯಸ್ಥರಾದ ಕಾರಣ

ಬರೆಸಿಕೊಂಡಿರಬಹುದು ಎಂದು ಹೇಳುತ್ತಾರೆ. ನೀವು ಮತ್ತು ಕುಳಲಿ ಬಾಂಡ್ ರೈಟರ ಅವರು ಮಿಲಾಪಿಯಾಗಿ ಸುಳ್ಳು ಬಾಂಡ್ ಪೇಪರನ್ನು ತಯಾರಿಸಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ